BORE WELLS OF HASSAN TALUK

93. Sri K. H. HANUME GOWDA (Hassan).—

Will the Minister for Community Development and Social Welfare be pleased to state :—

(*a*) the names of villages of Shantigram, Kattaya and Kasaba Hoblies in Hassan Taluk for which borewells are sanctioned;

(*b*) the number of bore well works that are completed and the time required for completion of the remaining bore well works ?

Sri M. MALLIKARJUNASWAMY (Minister for Community Development and Social Welfare).—

(*a*) *Shantigram Hobli*

1. Ranganathapura.
2. Thampalapura.

Kattaya Hobli :

3. Kallare Koppalu.

Kasaba Hoble :

4. Belkatihalli.

Chikkahonnenahalli.

Bore Wells are sanctioned to the above mentioned 5 villages;

(*b*) Two bore well works in the villages of Ranganathapura and Belkatihalli have been completed. Even though the wells are sunk in the remaining three villages, now water is found. It is proposed to make efforts in the matter in new sites within two months.

ಶ್ರೀ ಕೆ. ಎಚ್. ಹನುಮೇಗೌಡ.—ಉತ್ತರದಲ್ಲಿ ಐದು ಗ್ರಾಮಗಳಿಗೆ ಬೋರ್‌ವೆಲ್‌ಗಳನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದಾರೆ. ರಂಗನಾಥಪುರ ಮತ್ತು ಬಿ. ಕಾಜೆಹಳ್ಳಿ ಗ್ರಾಮಗಳಲ್ಲಿ ಈಗಾಗಲೆ ಬೋರ್ ವೆಲ್‌ಗಳ ಕೆಲಸ ಮುಗಿದಿದೆ ಎಂದು ಹೇಳಿದ್ದಾರೆ. ನಾನು ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ಆ ಬಾವಿಯನ್ನು 150 ಅಡಿ ಇಳಿಸಿದ್ದಾರೆ. ಆದರೆ ನೀರೇ ಬಂದಿಲ್ಲ. ಆದಾಗ್ಯೂ ಬಾವಿ ಕಂಪ್ಲೀಟಾಗಿದೆ ಎಂದು ಇಲ್ಲಿ ತಪ್ಪು ವರದಿಯನ್ನು ಕೊಟ್ಟಿರುತ್ತಾರೆ. ಸರಿಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ತಪ್ಪು ವರದಿ ಎಂದು ಮಾನ್ಯ ಸದಸ್ಯರು ಹೇಳುವುದು ಸರಿಯಾದ್ದಲ್ಲ.

ಶ್ರೀ ಕೆ. ಎಚ್. ಹನುಮೇಗೌಡ.—ಅಲ್ಲಿ 150 ಅಡಿ ಬಾವಿಯನ್ನೇನೋ ತೋಡಿದ್ದಾರೆ. ಆದರೆ ನೀರು ಇನ್ನೂ ಸಿಕ್ಕಿಲ್ಲ. ಅಷ್ಟಕ್ಕೆ ಅದಕ್ಕೆ ಪಂಪುಸೆಟ್ ಹಾಕಿದ್ದು ದುಡ್ಡೆಲ್ಲಾ ಮುಗಿಯಿತು ಎಂದು ಅಲ್ಲಿಂದ ಮೆಷನರಿಗಳನ್ನೆಲ್ಲಾ ಕಿತ್ತುಕೊಂಡು ಬಂದಿದ್ದಾರೆ. ಹಾಗಿರುವಾಗ ಸರ್ಕಾರದವರು ಹೀಗೆಲ್ಲ ಸುಳ್ಳು ಉತ್ತರಗಳನ್ನು ಸಭೆಗೆ ಕೊಡಬಹುದೆ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.— ನೀವು ಸುಳ್ಳು ಎಂಬ ಪದವನ್ನು ಉಪಯೋಗ ಮಾಡಬೇಡಿ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ಶುದ್ಧ ಸಂಸ್ಕೃತ ಪದವಾದ ಅನೃತ ಎಂದು ಹೇಳಬಹುದೋ ?

(ಉತ್ತರವಿಲ್ಲ)

ಶ್ರೀ ಕೆ. ಎಚ್. ಹನುಮೇಗೌಡ.—ಈಗ ಅಲ್ಲಿ ಏನು ಕಂಪ್ಲೀಟಾಗಿದೆ ಆ ಬಾವಿಗೆ ಹ್ಯಾಂಡ್ ಪಂಪನ್ನ ಹಾಕಿಪ್ಪಾರೆ. ಆದರೆ ಕಳೆದ 2 ದಿನಗಳಿಂದ ಊರಿನ ಜನರು ಯಾರೂ ನೀರನ್ನೇ ಬಳಸದಂತಾಗಿದೆ. ಇದಕ್ಕೆ ಕಾರಣರು ಯಾರು ? ಜವಾಬ್ದಾರರು ಯಾರು ? ಇದನ್ನು ಕೂಡಲೆ ನಿರಪಡಿಸುವುದಕ್ಕೆ ಅಥವಾ ಬೇರೆ ಮಿಷನ್ ಹಾಕುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಕೂಡಲೆ ಕಾರ್ಯಕ್ರಮ ಕೈಗೊಳ್ಳುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಆ ಹ್ಯಾಂಡ್ ಪಂಪನ್ನು ಯಾವ ಕಂಪೆನಿಯಿಂದ ಕೊಳ್ಳರಾಗಿತ್ತು ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅದಕ್ಕೆ ಪ್ರತ್ಯೇಕ ಪ್ರಶ್ನೆ ಕಳುಹಿಸಿದರೆ ಉತ್ತರ ಒದಗಿಸಲಾಗುತ್ತದೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯ ಮಂತ್ರಿಗಳು)—ಸರ್ಕಾರದವರು ಹಾಕತಕ್ಕ ಪಂಪುಗಳಲ್ಲಿ ಕೆಲವು ಕೆಟ್ಟುಹೋಗಿರತಕ್ಕವುಗಳೂ ಇರಬಹುದು. ಇಲ್ಲವೇ ಊರಿನ ಜನರು ಅಂದರೆ ಆ ಪಂಪನ್ನು ಹೆಂಗಸರೂ ಮಕ್ಕಳೂ ಎಲ್ಲರೂ ಅದರ ಉಪಯೋಗ ಹೇಗೆ ಮಾಡಬೇಕು ಎಂಬುದನ್ನು ಸರಿಯಾಗಿ ತಿಳಿಯದಿದ್ದರೂ ಅದನ್ನು ಉಪಯೋಗಿಸುವುದರಿಂದ ಅದು ತದನಂತರ ಕೆಟ್ಟಿದ್ದರೂ ಕೆಟ್ಟಿರಬಹುದು. ಆದರೆ ಇನ್ನು ಮುಂದಕ್ಕೆ ಶ್ರೀ ಕೋಣಂದೂರು ಲಿಂಗಪ್ಪನವರು ಹೇಳತಕ್ಕ ಕಂಪೆನಿಯಲ್ಲೆ ಈ ಪಂಪುಗಳನ್ನು ಕೊಳ್ಳೋಣ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಈ ಬೋರ್‌ವೆಲ್ಲುಗಳನ್ನು '64' ಫ್ಯಾಮಿನ್ ಹೆಡ್ಡಿನಲ್ಲಿ ತೆಗೆಸಲಾಗುತ್ತಿದೆ. ಆದರೆ ಹ್ಯಾಂಡ್‌ಪಂಪುಗಳು ಬಹುಬೇಗ ಕೆಟ್ಟುಹೋಗುವುದರಿಂದ ಅವುಗಳನ್ನೆಲ್ಲಾ ಬದಲಾಯಿಸಿ ಅಲ್ಲಿ ಈ ಎಸ್. ಆರ್. ಡಬ್ಲ್ಯು ಸ್ಕೀಮಿನಲ್ಲಿ ಪವರ್ ಅಥವಾ ಡಿಸೀಲ್ ಎಂಜಿನ್‌ಗಳನ್ನು ಹಾಕಿ ಈ ತೊಂದರೆಯನ್ನು ಪರಿಹರಿಸುವುದಕ್ಕಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಈಗಾಗಲೇ ಎಲ್ಲಿ ಎಲೆಕ್ಟ್ರಿಸಿಟಿ ಇರುವುದಿಲ್ಲವೋ ಅಂಥ ಸ್ಥಳದಲ್ಲಿ ಮಾತ್ರ ಈ ತೊಂದರೆ ಇದೆ. ಎಲೆಕ್ಟ್ರಿಸಿಟಿ ಇರತಕ್ಕ ಕಡೆ ಅಲ್ಲಿ ಪವರನ್ನೇ ಉಪಯೋಗಿಸಲಾಗಿದೆ. ಆದರೆ ಕೆಲವು ಕಡೆ ಎಲೆಕ್ಟ್ರಿಸಿಟಿ ಇರುವುದಿಲ್ಲ ಎನ್ನತಕ್ಕ ಕಾರಣದ ಮೇಲೆ ಅಲ್ಲಿ ನೀರನ್ನು ಕೊಡದೆ ಇರುವುದಕ್ಕಾಗುವುದಿಲ್ಲ. ಅಂಥಾ ಕಡೆಗಳಲ್ಲಿ ಹ್ಯಾಂಡ್ ಪಂಪುಗಳನ್ನು ಹಾಕಲೇ ಬೇಕಾಗುವುದು. ಆದರೆ ಬಳಸತಕ್ಕ ಜನರೂ ಅದನ್ನು ಸರಿಯಾಗಿ ಬಳಸದೆ ಇರುವ ಕಾರಣ ಅದು ಕೆಡಬಹುದು. ಆದರೆ ಅಧನ್ನೆಲ್ಲಾ ಗಮನಕ್ಕೆ ತೆಗೆದುಕೊಳ್ಳದೆ ಸರ್ಕಾರದವರು ಫಿಕ್ಸ್ ಮಾಡಿದ ಪಂಪ್ ಕೆಟ್ಟುಹೋಗಿತ್ತು, ಅದಕ್ಕಾಗಿ ನೀರು ಬರಲಿಲ್ಲ ಎಂಬ ಪೂರ್ಣ ಕಾರಣವನ್ನು ಸರ್ಕಾರದವರ ಮೇಲೆ ಹಾಕಿದರೆ ಅದನ್ನು ಸರ್ಕಾರದವರು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಪಿ. ಎನ್. ಪಾಟೀಲ್.—(ಅ) ಪ್ರಶ್ನೆಗೆ ಉತ್ತರವಾಗಿ ಎರಡು ಬೋರ್‌ವೆಲ್‌ಗಳ ಕೆಲಸ ಮುಗಿದಿದೆಯೆಂದು ಹೇಳುತ್ತೀರಿ. ಆದರೂ ಬಹಳ ಕಡೆಗಳಲ್ಲಿ ನೀರು ಬಾರದೇ ಇರುವುದು ತಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಮತ್ತೆ ಕೆಲವು ಕಡೆಗಳಲ್ಲಿ ನೀರು ಬರುವುದು ಫ್ಲೇಲ್ಯೂರ್ ಆಗಿದೆ. ಗುಳ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಕೆಲವು ಕಡೆಗಳಲ್ಲಿ ಪಿ.ಎಚ್.ಡಿ ಯವರು ಕಾವೇರಿ ಪಂಪ್ಸ್ ಹಾಕಿದ್ದರೂ ಇನ್ನೂ ಡಿಫೆಕ್ಟ್ಸ್ ಇವೆಯೆಂದು ಹೇಳಿದಾಗ, ಮಾನ್ಯ ಹೆಲ್ತ್ ಮಿನಿಸ್ಟರ್‌ರವರು ಬಂದು ಇನ್ನು 15 ದಿನಗಳಲ್ಲಿ ಎಲ್ಲಾ ಡಿಫೆಕ್ಟ್ಸನ್ನು ಸೋಗಲಾಡಿಸಲಾಗುತ್ತದೆಂದು ಹೇಳಿ ಬಂದಿದ್ದಾರೆ. ಈ ವಿಚಾರ ಮಂತ್ರಿಮಂಡಲದ ಗಮನದಲ್ಲಿದ್ದರೂ, ಅದರ ಬಗ್ಗೆ ಯಾವ ಒಂದು ಕ್ರಮವನ್ನೂ ತೆಗೆದುಕೊಳ್ಳದೇ ಇರುವುದರಿಂದ, ಇದುವರೆಗೆ ಅನೇಕ ಕಡೆಗಳಲ್ಲಿ ನೀರು ಬರುತ್ತಾ ಇಲ್ಲ. ಈ ರೀತಿಯಾಗಿ ನೀರು ಬರುವುದು ಫೇಲ್ಯೂರ್ ಅದರೆ ಮತ್ತೊಂದು ಬಾವಿಯ ಮೂಲಕ ವಾದರೂ ನೀರು ಬರುವಂತೆ ಮಾಡುವುದಕ್ಕೆ ಅಂಟೆಮ್ಟ್ ಮಾಡುವುದು ಉಚಿತವಲ್ಲವೇ ?

ಶ್ರೀ ಡಿ. ದೇವರಾಜ್ ಅರ್ಸ್.—ಆ ರೀತಿಯೇ ಮಾಡೋಣ. ಹಿಂದೆ ಹಾಕಿರತಕ್ಕ ಪಂಪ್ಸ್ ಕೆಟ್ಟುಹೋದರೆ, ಅವನ್ನೂ ಸರಿಮಾಡೋಣ. ಈಗ ಹಾಕಿರತಕ್ಕ ಪಂಪ್‌ಗಳನ್ನು ಅಡಷ್ಟು ಜಾಗ್ರತೆ ಸರಿಮಾಡಿಸುತ್ತೇವೆ. ಮಾನ್ಯ ಸದಸ್ಯರ ದೃಷ್ಟಿಯಲ್ಲಿ ಯಾವ ಫರ್ಮ್‌ಗೆ ಈ ಕೆಲಸವನ್ನು ಕೊಡಬೇಕೆಂದು ಹೇಳಿದರೆ, ಅಲ್ಲಗೇ ಇವನ್ನು ಕಳುಹಿಸಿ ಸರಿಮಾಡಿಸೋಣ.